

ಇಡೀ ಸಿನಿಮಾವನ್ನು ಸ್ಪ್ರಿಂಗ್, ಸಮ್ಮರ್, ಫಾಲ್, ವಿಂಟರ್ ಎಂಬ ಕಾಲದ ಘಟಕಗಳ ಆವರ್ತನದಲ್ಲಿಯೇ ವಿನ್ಯಾಸಗೊಳಿಸಿದ್ದಾರೆ ಡುಕ್. ಪ್ರಕೃತಿಯ ವಿವಿಧ ಕಾಲಗಳನ್ನೂ ಬೌದ್ಧ ಭಿಕ್ಷು ಒಬ್ಬನ ಬದುಕಿನ ವಿವಿಧ ಘಟ್ಟಗಳನ್ನು ಸಮೀಕರಿಸಿರುವ ಬಗೆಯಲ್ಲಿಯೇ ಈ ಸಿನಿಮಾದ ಸೌಂದರ್ಯವಿದೆ.

ಬಾಲಕ ಹರೆಯಕ್ಕೆ ಬಂದಾಗ ಗುರುಗಳಿಂದ ಬೇರೆಯಾಗಿ, ಹುಡುಗಿಯ ಮೋಹಕ್ಕೆ ಒಳಗಾಗಿ ಆಶ್ರಮ ತ್ಯಜಿಸುತ್ತಾನೆ. ನಂತರ ಅವನು ತಿರುಗಿ ಬರುವುದು ಮನಃಪೂರ್ತಿ ಕ್ರೋಧದ ವಿಷವನ್ನು ತುಂಬಿಕೊಂಡ ಕೊಲೆಗಾರನಾಗಿ. ಗುರು ಏನನ್ನೂ ಉಪದೇಶಿಸದೆ ಮತ್ತದೇ ಪ್ರೀತಿಯಿಂದ ಅವನನ್ನು ತಡವಿ, ಕೊಳೆ ತೊಳೆದು ಕಾರಾಗೃಹಕ್ಕೆ ಕಳಿಸುತ್ತಾನೆ. ಶಿಕ್ಷೆ ಅನುಭವಿಸಿ ಮತ್ತೆ ವಾಪಸಾಗುವ ಶಿಷ್ಯನಿಗೆ ಗುರುವಿನ ಬದಲಾಗಿ ಅವರ ಉಡುಪು, ಮತ್ತೆ ಜ್ಞಾನ ಸಿದ್ಧಿಯ ಮಾರ್ಗದರ್ಶಿ ಸೂಚಿಕೆಗಳಷ್ಟೇ ಸಿಗುತ್ತವೆ. ಅಲ್ಲಿಂದ ತನಗೆ ತಾನೇ ಗುರುವಾಗಿ ಅರಿವನ್ನು ಪಡೆದುಕೊಳ್ಳುತ್ತಾನೆ.

ನೇರವಾಗಿ ನಿರೂಪಿತವಾಗುತ್ತಿರುವ ಕಥೆಯ ಜತೆಗೆ ಉಪಪಠ್ಯಗಳ(ಸಬ್ ಟೆಕ್ಸ್ಟ್) ಮೂಲಕವೂ ಹಲವು ಕವಲುಗಳ ಕಾಣ್ಕೆಗಳನ್ನು ಕಾಣಿಸುತ್ತ ಹೋಗುತ್ತಾನೆ ಡುಕ್.